

ರಸ್ತೆ ಕಣ್ಮರೆ

## ದಾರಿ ಯಾವುದಯ್ಯ?

ಮಡಿಕೇರಿ–ಮಂಗಳೂರು, ಮಡಿಕೇರಿ–ಸೋಮವಾರಪೇಟೆ ಹೆದ್ದಾರಿಗಳು ಸೇರಿದಂತೆ ಕೊಡಗಿನ ಬಹುತೇಕ ರಸ್ತೆಗಳು ಮತ್ತೆ ಸಂಚಾರಕ್ಕೆ ಯೋಗ್ಯವಾಗಲು ವರ್ಷಗಳಷ್ಟು ಕಾಲಾವಕಾಶವೇ ಬೇಕು ಎನ್ನುತ್ತಾರೆ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು.

ಮಂಗಳೂರು ರಸ್ತೆಯಲ್ಲಿ ಹಲವೆಡೆ ಗುಡ್ಡಗಳು ಕುಸಿದಿವೆ. ರಸ್ತೆಯೇ ಬಿರುಕು ಬಿಟ್ಟಿದೆ. ಜೋಡುಪಾಲದ ಬಳಿ ರಸ್ತೆಯಿದ್ದ ಕುರುಹು ಇಲ್ಲದಂತೆ ಇಡೀ ಪ್ರದೇಶ ಕೆಸರಿನ ಗದ್ದೆಯಾಗಿದೆ.

ಸೋಮವಾರಪೇಟೆ ರಸ್ತೆಯಂತೂ ಮಕ್ಕಂದೂರು ಬಳಿ ಅದೃಶ್ಯವಾಗಿಬಿಟ್ಟಿದೆ. ಅದನ್ನು ಮರು ನಿರ್ಮಿಸುವುದು ಸದ್ಯಕ್ಕಂತೂ ಆಗದ ಕೆಲಸ ಎನ್ನುತ್ತಾರೆ ಅಧಿಕಾರಿಗಳು. ಮಡಿಕೇರಿ ಪಕ್ಕದ ಕಾಲೂರಿಗೆ ಈಗ ನಡೆದುಕೊಂಡು ಹೋಗಲು ಸಾಧ್ಯವಿಲ್ಲದಂತೆ ಹಾದಿ ಕೊಚ್ಚಿಹೋಗಿದೆ. ಮಂಗಳೂರಿನೊಂದಿಗೆ ಹೆಚ್ಚಿನ ಸಂಬಂಧ ಇಟ್ಟುಕೊಂಡಿರುವ ಕೊಡಗು ಜನ ಈಗ ಬಳಸಿಕೊಂಡು ಅಲ್ಲಿಗೆ ಹೋಗಬೇಕಿದೆ.

ಕುಸಿತದ ತಾಣಗಳಲ್ಲಿ ಕಂಡದ್ದು–ಕೇಳಿದ್ದು...

★ ಮಡಿಕೇರಿ ಹತ್ತಿರದ ಕಾಲೂರಿಗೆ ಭೇಟಿ ನೀಡಿದಾಗ ರವಿ ಗಾಳಿಬೀಡು ಎಂಬುವರು ಮಾತಿಗೆ ಸಿಕ್ಕರು. ಈ ಸಲ ಇಷ್ಟೊಂದು ಮಳೆ ಸುರಿಯಲು ಚೀನಾದ ಪಿತೂರಿಯೇ ಕಾರಣ ಎಂದು ದೂರಿದರು. ಅವರ ಪ್ರಕಾರ, ಬಯಸಿದ ಸ್ಥಳದಲ್ಲಿ ಮಳೆ ಬರಿಸುವ ತಂತ್ರಜ್ಞಾನ ಚೀನಾದವರಿಗೆ ಸಿದ್ಧಿಸಿದೆಯಂತೆ. ಸೈನ್ಯದಲ್ಲಿ ಕೊಡವರು ಹೆಚ್ಚಾಗಿದ್ದರಿಂದ ಆ 'ಶತ್ರು ದೇಶ' ಅತಿವೃಷ್ಟಿಯ ಈ ಅಸ್ತ್ರ ಹೂಡಿದೆಯಂತೆ!

★ ದುರಂತದ ಚಿತ್ರಣವನ್ನು ನಾಡಿನ ಉಳಿದ ಭಾಗಗಳಿಗೆ ತೋರಿಸುವಲ್ಲಿ ಮೊಬೈಲ್‌ಗಳು ಬಳಕೆಯಾದ ಪರಿ ಅಮೋಘ. ರಕ್ಷಣಾ ಕಾರ್ಯಾಚರಣೆ ನೋಡಲು ಬಂದವರು, ಸ್ವಯಂಸೇವಕರು, ಸಮೀಕ್ಷೆಗೆ ನಿಂತವರು, ಅಧಿಕಾರಿಗಳು ಗುಡ್ಡ ಕುಸಿತದ ಚಿತ್ರಣಗಳನ್ನು ವೀಡಿಯೊ ಮಾಡಿ, ವಾಟ್ಸ್ ಆ್ಯಪ್ ಮಾಡಿದ್ದೇ ಮಾಡಿದ್ದು.

ಟಿವಿ ವರದಿಗಾರರು ಹೇಳುವಂತೆ, 'ನಾವು ಈಗ ನಿಂತಿರುವ ಸ್ಥಳ ಹಾಲೇರಿ ಗುಡ್ಡ, ಇಡೀ ಗುಡ್ಡ ಹೇಗೆ ಕುಸಿದಿದೆ, ರಸ್ತೆ ಹೇಗೆ ಕಿತ್ತು ಹೋಗಿದೆ ಎಂಬುದನ್ನು ನೀವು ನೋಡಬಹುದು. ಪರಿಸ್ಥಿತಿಯ ಭೀಕರತೆಗೆ ಇದು ಸಾಕ್ಷಿ' ಎಂಬಂತಹ ವೀಕ್ಷಕ ವಿವರಣೆ ನೀಡುತ್ತಿದ್ದ ಅವರು, ಸಿಟಿಜನ್ ರಿಪೋರ್ಟರ್‌ಗಳಾಗಿದ್ದರು.

★ ಸುಂಟಿಕೊಪ್ಪದ ಆಶ್ರಯ ಕೇಂದ್ರದಲ್ಲಿ ಆಶ್ರಯ ಪಡೆದಿದ್ದ ಮಾದೇವಮ್ಮ ಎಸ್ಟೇಟ್ ಒಂದರಲ್ಲಿ ಕೂಲಿ ಕೆಲಸ ಮಾಡುತ್ತಿದ್ದವರು. 'ನಾವೇನೋ ಕೂಲಿ ಮಾಡ್ಕೊಂಡು ಹೆಂಗೋ ಬದುಕ್ಕೋತೀವಿ. ಎಸ್ಟೇಟ್ ಕಳ್ಕೊಂಡ ನಮ್ ಮಾಲೀಕರು ಏನು ಮಾಡ್ತಾರೋ ಪಾಪ' ಎಂದು ಚಿಂತಿಸುತ್ತಿದ್ದಳು. ದುರಂತದಲ್ಲಿ ಕಷ್ಟ ಅನುಭವಿಸುತ್ತಿದ್ದರೂ ಮಿಕ್ಕವರ ಒಳಿತಿಗಾಗಿ ಅವರ ಮನ ಮಿಡಿಯುತ್ತಿತ್ತು.

★ ದುರಂತದ ಸ್ಥಳಗಳಿಂದ ಜನರೆಲ್ಲ ಮನೆ–ಮಠ ಬಿಟ್ಟು ಓಡಿದರೂ ಸಾಕು ಪ್ರಾಣಿಗಳು ಅಲ್ಲಿಯೇ ಉಳಿದಿದ್ದವು. ಅವುಗಳಲ್ಲಿ ಒಂದಿಷ್ಟು ಅಸುನೀಗಿದರೆ ಉಳಿದವು ಪ್ರಾಣ ಹಿಡಿದುಕೊಂಡು ಅಲ್ಲಿಯೇ ಉಳಿದಿದ್ದವು. ಮಾಂದಲಪಟ್ಟಿ ಬಳಿ ಕರುವೊಂದು ಮಣ್ಣಿನಲ್ಲಿ ಎಂಟು ದಿನಗಳವರೆಗೆ ದೇಹವೆಲ್ಲ ಹೂತು ಮುಖ ಮಾತ್ರ ಹೊರಗಿದ್ದರೂ ಬದುಕಿ ಉಳಿಯಿತು. ಜನ ಕೊನೆಗೂ ಅದನ್ನು ಸುರಕ್ಷಿತವಾಗಿ ಕರೆತಂದರು. ಸ್ಮಶಾನ ಮೌನ ಆವರಿಸಿದ್ದ ಎಸ್ಟೇಟ್‌ಗಳು, ಊರುಗಳಲ್ಲಿ ಮಾಲೀಕರ ಬರುವಿಗಾಗಿ ನಾಯಿಗಳು ಕಾದು ಕುಳಿತಿರುವುದು ಎದ್ದು ಕಾಣುತ್ತಿತ್ತು.

ಭೂವಿಜ್ಞಾನ ವಿಭಾಗದ ಮುಖ್ಯಸ್ಥ ಎ.ಬಾಲಸುಬ್ರಮಣಿಯನ್.

'ಗುಡ್ಡಕ್ಕೆ ಹೊದಿಕೆಯಾಗಿರುವ ಮಣ್ಣಿನ ಪದರದ ಗಾತ್ರ, ಭೂಮಿಯ ಸ್ಥಿರತೆ, ಮಳೆಯ ತೀವ್ರತೆ, ನೀರು ಹರಿದು ಹೋಗುವ ಸೌಲಭ್ಯ ಇವುಗಳನ್ನೆಲ್ಲ ಗಣನೆಗೆ ತೆಗೆದುಕೊಂಡು ಅಪಾಯದ ವಲಯಗಳನ್ನು ಗುರುತಿಸಬೇಕು. ಅಂತಹ ಪ್ರದೇಶಗಳ ನಿಖರತೆಗಾಗಿ ಪ್ರತಿ 100 ಚದರ ಅಡಿ ಪ್ರದೇಶವನ್ನೂ ಒಂದೊಂದು ವಲಯವನ್ನಾಗಿ ಗುರುತು ಮಾಡಿಕೊಳ್ಳಬೇಕು' ಎಂದು ಸಲಹೆ ನೀಡುತ್ತಾರೆ. ಬಾಲಸುಬ್ರಮಣಿಯನ್ ಅವರ ಈ ಸಲಹೆ ಪುನರ್ವಸತಿ ಯೋಜನೆ ರೂಪಿಸುವಲ್ಲಿ ಮಹತ್ವದ್ದಾಗಿದೆ.

ಯಾವುದು ಸ್ಥಿರ, ಯಾವುದು ಅಸ್ಥಿರ ಪ್ರದೇಶ ಎನ್ನುವುದನ್ನು ಭೂಸರ್ವೇಕ್ಷಣಾ ಇಲಾಖೆಯ ವಿಜ್ಞಾನಿಗಳು ಈಗ ಸಮೀಕ್ಷೆ ಮಾಡುತ್ತಿದ್ದಾರೆ. ಅಸ್ಥಿರ ಪ್ರದೇಶಗಳಲ್ಲಿದ್ದ ಜನವಸತಿಯನ್ನು ಸ್ಥಳಾಂತರ ಮಾಡುವ ಯೋಚನೆ ಸರ್ಕಾರಕ್ಕಿದೆ. ಸಂಪೂರ್ಣವಾಗಿ ಹಾಳಾಗಿರುವ ಎಸ್ಟೇಟ್‌ಗಳು ಹಾಗೂ ತೋಟಗಳ ಮಾಲೀಕರು, ಮಾರುಕಟ್ಟೆ ದರ ಸಿಕ್ಕರೆ ಅವುಗಳನ್ನು ಸರ್ಕಾರಕ್ಕೆ ಬಿಟ್ಟುಕೊಡಲು ಸಿದ್ಧ ಎನ್ನುತ್ತಿದ್ದಾರೆ. ಏಕೆಂದರೆ, ಅವುಗಳನ್ನು ಮತ್ತೆ ಬೆಳೆ ತೆಗೆಯುವಂತೆ ಸನ್ನದ್ಧಗೊಳಿಸಲು ಮೂರು ಪೀಳಿಗೆಗಳವರೆಗೆ ದುಡಿಯಬೇಕಂತೆ!

ಗುಡ್ಡಗಾಡಿನಲ್ಲಿರುವ ಕೊಡಗಿನ ಪ್ರದೇಶವನ್ನೇ ಹತ್ತಿರದ ಸಮತಟ್ಟಾದ ಪ್ರದೇಶಕ್ಕೆ ಸ್ಥಳಾಂತರ ಮಾಡಬೇಕು. ಇದರಿಂದ ಮಾಧವ ಗಾಡ್ಗೀಳ್ ಹಾಗೂ ಕೆ.ಕಸ್ತೂರಿರಂಗನ್ ಅವರ ವರದಿಗಳಂತೆ ಕಾಡಿನ ರಕ್ಷಣೆಗೆ ಕ್ರಮ ಕೈಗೊಂಡಂತೆ ಆಗುತ್ತದೆ. ಅಲ್ಲದೆ, ಅಪಾಯಕ್ಕೆ ಸಿಲುಕಿರುವ ಇಲ್ಲಿನ ಜನರಿಗೆ ಸುರಕ್ಷಿತ ಹಾಗೂ ಶಾಶ್ವತವಾದ ನೆಲೆ ಒದಗಿಸಿದಂತೆ ಆಗುತ್ತದೆ ಎಂದು ಹೇಳುತ್ತಾರೆ ಕೊಡಗು ಡಿಸಿಸಿ ಬ್ಯಾಂಕ್‌ನ ಹಿಂದಿನ ಅಧ್ಯಕ್ಷ ಬಿ.ಡಿ. ಮಂಜುನಾಥ್.

ಕೊಡಗಿನ ವಾಣಿಜ್ಯ ಚಟುವಟಿಕೆ ನಿಂತಿರುವುದೇ ಕಾಫಿ ಹಾಗೂ ಸಾಂಬಾರು ಪದಾರ್ಥವನ್ನು ಬೆಳೆದುಕೊಡುವ ತೋಟಗಳು ಮತ್ತು ಪ್ರವಾಸಿಗಳನ್ನು ಸೆಳೆಯುವ ಹೋಂ ಸ್ಟೇಗಳ ಮೇಲೆ. ಕಾಡಿನಿಂದ ಹೊರಬಂದು ಬಯಲು ಪ್ರದೇಶದಲ್ಲಿ ನೆಲೆನಿಂತರೆ ಅವರ ಅನ್ನದ ಬಟ್ಟಲು ತುಂಬುವ ಬಗೆ ಹೇಗೆ ಎಂಬ ಪ್ರಶ್ನೆಯೂ ಕೇಳಿಬರುತ್ತಿದೆ. ಅಪಾಯದ ಮಡುವಿನಲ್ಲಿರುವ ಹಳ್ಳಿಗಳನ್ನು ಸ್ಥಳಾಂತರ ಮಾಡುವ ಜತೆಗೆ ನಿಯಂತ್ರಿತ ಪ್ರವಾಸೋದ್ಯಮಕ್ಕೆ ಅವಕಾಶ ಮಾಡಿಕೊಡವಲ್ಲಿ ಕಾಡು ಮತ್ತು ಕೊಡವ ಸಮುದಾಯ ಎರಡರ ಹಿತವೂ ಅಡಗಿದೆ ಎನ್ನುತ್ತಾರೆ ಈ ಭಾಗದ ಜನಪ್ರತಿನಿಧಿಗಳು.

ಚೇತರಿಕೆ ಹಾದಿ ಕಲ್ಲು–ಮುಳ್ಳುಗಳಿಂದ ಕೂಡಿದೆ. ಕಳೆದುಕೊಂಡದ್ದನ್ನು ಮತ್ತೆ ಪಡೆಯುವುದು ಕೂಡ ಸುಲಭವಲ್ಲ. ಆದರೆ, ಬದುಕು ಮತ್ತೆ ಚಿಗುರಬೇಕಿದೆ. ಆ ಶಕ್ತಿ ಕೂಡ ಅಲ್ಲಿನ ಮಣ್ಣಿಗಿದೆ. ಕೊಡವರ ಜೀವನ್ಮುಖಿ ಪಯಣದ ಪ್ರತಿ ಹೆಜ್ಜೆಯೂ ಮರುಹುಟ್ಟಿನತ್ತ ಮಹಾಪಯಣವೇ ಆಗಿದೆ. ಗುಡ್ಡಗಳು ಕುಸಿದರೂ ಬದುಕು ಕುಸಿಯಲು ಬಿಡುವುದಿಲ್ಲ ಎಂಬ ಎದೆಗಾರಿಕೆಯೇ ಅವರ ಹೊಸಜೀವನಕ್ಕೆ ಅಡಿಪಾಯವಾಗಲಿದೆ.